ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **890**
ಸದಸ್ಯರ ಹೆಸರು : ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 20.09.2021
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

*****

	ಪ್ರಶ್ನೆ	ಉತ್ತರ
ಅ	EMPLOYMENT NOTIFICATION NO KPTCL/B16/86393, 2018-19 ರಡಿ KPTCL, BESCOM, HESCOM, CESCOM, MESCOM, GESCOM ಈ ಇಂಧನ ಇಲಾಖೆಯ ನಿಗಮ ಸಂಸ್ಥೆಗಳಲ್ಲಿ ನೇಮಕಾತಿ ಆದೇಶ ಮಾಡಿ ಅರ್ಜಿಗಳನ್ನು ಆಹ್ವಾನಿಸಿದ್ದು, ರಾಜ್ಯಾದ್ಯಂತ ಎಷ್ಟು ಅಭ್ಯರ್ಥಿಗಳಿಂದ ಅರ್ಜಿಯನ್ನು ಸಲ್ಲಿಸಲಾಗಿದೆ: (ಸಂಪೂರ್ಣ ಮಾಹಿತಿ ನೀಡುವುದು)	ಕವಿಪ್ರನಿನಿ ಉದ್ಯೋಗ ಪ್ರಕಟಣೆ ಸಂಖ್ಯೆ: KPTCL/B16/ 86393/2018-19 ಸಂಬಂಧ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ನೇಮಕಾತಿಗೆ ಸಂಬಂಧಿಸಿದಂತೆ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ವಿವರ ಈ ಕೆಳಕಂಡಂತಿದೆ: (see table below)

ಕ್ರ. ಸಂ.	ಹುದ್ದೆಯ ಹೆಸರು	ಒಟ್ಟು ಅರ್ಜಿ ಸಂಖ್ಯೆ	ಅರ್ಜಿ ಶುಲ್ಕ ಪಾವತಿಯಾಗಿರುವ ಅರ್ಜಿಗಳ ಸಂಖ್ಯೆ
1	ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)	12179	12040
2	ಸಹಾಯಕ ಇಂಜಿನಿಯರ್(ವಿ)	22170	21988
3	ಸಹಾಯಕ ಇಂಜಿನಿಯರ್(ಸಿ)	14289	14128
4	ಕಿರಿಯ ಇಂಜಿನಿಯರ್ (ವಿ)	21060	20840
5.	ಕಿರಿಯ ಇಂಜಿನಿಯರ್ (ಸಿ)	8332	8213
6.	ಕಿರಿಯ ಆಪ್ತ ಸಹಾಯಕ	592	316
7	ಕಿರಿಯ ಸಹಾಯಕ	136647	131370
	ಒಟ್ಟು	**215269**	**208895**

	ಪ್ರಶ್ನೆ	ಉತ್ತರ
ಆ	ಸದರಿ ಅಧಿಸೂಚನೆಯಲ್ಲಿ ಎ.ಇ, ಜೆ.ಇ, ಕಿರಿಯ ಆಪ್ತ ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿಯನ್ನು ರದ್ದುಪಡಿಸಲಾಗಿದೆಯೇ: ರದ್ದುಪಡಿಸಿದ್ದಲ್ಲಿ, ಯಾವ ಕಾರಣಗಳಿಂದ ರದ್ದುಪಡಿಸಲಾಗಿದೆ:	ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಉಂಟಾಗಿದ್ದ ನೆರೆ ಹಾವಳಿಯಿಂದಾಗಿ ಕವಿಪ್ರನಿನಿ ಮತ್ತು ಎಸ್ಕಾಂಗಳ ಸಿಬ್ಬಂದಿಗಳು ನಿರಂತರ ವಿದ್ಯುತ್ ಸರಬರಾಜು ಪೂರೈಕೆ ಕಾರ್ಯದಲ್ಲಿ ನಿರತರಾಗಿದ್ದರಿಂದ ಹಾಗೂ ಮಾರ್ಚ್-2020 ರಿಂದ ಕೊರೊನಾ ವೈರಸ್ ಹರಡುವಿಕೆಯಿಂದ, ವಾಣಿಜ್ಯ/ಕೈಗಾರಿಕಾ ಸ್ಥಾವರಗಳ ವಿದ್ಯುತ್ ಬೇಡಿಕೆ ಕಡಿಮೆಯಾಗಿದ್ದುದರಿಂದ, ಕಂದಾಯ ವಸೂಲಾತಿಯಲ್ಲಿ ಗಣನೀಯ ಇಳಿಕೆಯಾಗಿ ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಿರುತ್ತದೆ. ಸದರಿ ಪರಿಸ್ಥಿತಿಯನ್ನು ನಿಭಾಯಿಸಿ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಅಗತ್ಯವಾಗಿದ್ದುದರಿಂದ ಹಾಗೂ ಆರ್ಥಿಕ ಇಲಾಖೆಯು ದಿನಾಂಕ: 06.07.2020 ರ ಸುತ್ತೋಲೆಯಲ್ಲಿ, 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕ್ ಲಾಗ್ ಹುದ್ದೆಗಳು ಸೇರಿದಂತೆ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ

...2

ಆದೇಶದವರೆಗೆ ತಡೆಹಿಡಿಯಲು ಸೂಚಿಸಿರುತ್ತದೆ. ಅಲ್ಲದೆ, ಈ ಹುದ್ದೆಗಳಿಗೆ ಆಪ್ಟಿಟ್ಯೂಡ್ ಪರೀಕ್ಷಾ ಪ್ರಕ್ರಿಯೆಯು ಪ್ರಾರಂಭಗೊಳ್ಳದೆ ಇದ್ದುದರಿಂದ ಮತ್ತು ನಿಗಮ/ಎಸ್ಕಾಂಗಳ ವೆಚ್ಚದ ಬಾಬ್ತಿನಲ್ಲಿ ಮಿತವ್ಯಯ ಪಾಲಿಸುವ ಅವಶ್ಯಕತೆ ಇದ್ದುದರಿಂದ, AE, JE, JPA, JA ಹುದ್ದೆಗಳು ಸೇರಿದಂತೆ, ಒಟ್ಟು 1559 ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ 'ರದ್ದುಗೊಳಿಸುವ ಅಂಶವನ್ನು' ದಿನಾಂಕ: 09.09.2020 ರಂದು ನಡೆದ ಕವಿಪ್ರನಿನಿ ಯ ನಿರ್ದೇಶಕರುಗಳ 121ನೇ ಮಂಡಳಿ ಸಭೆಯ ಗಮನಕ್ಕೆ ತಂದು, ದಿನಾಂಕ: 21.11.2020 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಇ) ಸದರಿ ಅಧಿಸೂಚನೆಯಲ್ಲಿ ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳಿಗೆ, ಅರ್ಜಿ ಶುಲ್ಕವನ್ನು ಸಾಮಾನ್ಯ ಹಾಗೂ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ರೂ.500/- ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ರೂ.300/- ಗಳನ್ನು ನಿಗಧಿಪಡಿಸಿತ್ತು. ಇಂಧನ ಇಲಾಖೆಯ ಎಲ್ಲಾ ನಿಗಮ ಸಂಸ್ಥೆಗಳು ಸ್ವೀಕರಿಸಲಾದ ಅರ್ಜಿ ಶುಲ್ಕದ ಒಟ್ಟು ಮೊತ್ತ ಎಷ್ಟು: (ಎಲ್ಲಾ ನಿಗಮ ಸಂಸ್ಥೆಗಳವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು)

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಕೆಯಿಂದ ಸಂಗ್ರಹವಾಗಿರುವ ಒಟ್ಟು ಮೊತ್ತ ರೂ.9.11 ಕೋಟಿಗಳಷ್ಟಾಗಿರುತ್ತದೆ. ವಿವರವು ಈ ಕೆಳಕಂಡಂತಿದೆ:

ಕಂಪನಿಯ ಹೆಸರು	ಸ.ಕಾ.ನಿ ಇಂ(ವಿ)	ಸ.ಇಂ (ವಿ)	ಸ.ಇಂ (ಸಿ)	ಕಿ.ಇಂ (ವಿ)	ಕಿ.ಇಂ (ಸಿ)	ಕಿಆಸ	ಕಿಸ	ಒಟ್ಟು
ಕವಿಪ್ರನಿನಿ	28.90	17.53	40.29	62.28	18.14	0.42	92.44	260.04
ಬೆಸ್ಕಾಂ	0	26.43	7.39	9.81	0	0.61	380.39	424.64
ಸೆಸ್ಕ್	3.56	2.68	0	2.54	1.85	0.08	86.21	96.92
ಮೆಸ್ಕಾಂ	6.55	1.31	1.27	0	1.20	0.20	0	10.53
ಹೆಸ್ಕಾಂ	4.56	33.82	4.69	6.25	8.80	0.31	0	58.43
ಜೆಸ್ಕಾಂ	9.64	18.66	12.00	14.45	5.54	0.59	0	60.88
ಒಟ್ಟು	**53.21**	**100.43**	**65.64**	**95.33**	**35.53**	**2.21**	**559.04**	**911.44**

ಸ.ಕಾ.ನಿ.ಇಂ(ವಿ)	-	ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸ.ಇಂ(ವಿ)	-	ಸಹಾಯಕ ಇಂಜಿನಿಯರ್(ವಿ)
ಸ.ಇಂ(ಸಿ)	-	ಸಹಾಯಕ ಇಂಜಿನಿಯರ್(ಸಿವಿಲ್)
ಕಿ.ಇಂ(ವಿ)	-	ಕಿರಿಯ ಇಂಜಿನಿಯರ್(ವಿ)
ಕಿ.ಇಂ(ಸಿ)	-	ಕಿರಿಯ ಇಂಜಿನಿಯರ್(ಸಿವಿಲ್)
ಕಿ.ಆ.ಸ.	-	ಕಿರಿಯ ಆಪ್ತ ಸಹಾಯಕ
ಕಿ.ಸ	-	ಕಿರಿಯ ಸಹಾಯಕ

ಈ) ಅಧಿಸೂಚನೆಯ ನೇಮಕಾತಿಯನ್ನು ರದ್ದುಪಡಿಸಿದ ನಂತರ KPTCL, BESCOM, HESCOM, CESCOM, MESCOM, GESCOM ಈ ನಿಗಮ ಸಂಸ್ಥೆಗಳು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಂದ ಸ್ವೀಕರಿಸಲಾದ ಅರ್ಜಿ ಶುಲ್ಕವನ್ನು ವಾಪಸ್ ನೀಡಲಾಗಿದೆಯೇ:

ಉ) ಇಲ್ಲದಿದ್ದಲ್ಲಿ, ಇಷ್ಟು ದಿನ ಅರ್ಜಿ ಶುಲ್ಕ ವಾಪಸ್ ನೀಡದಿರಲು ಕಾರಣವೇನು:

ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ ಬಿ16/86393/ 2018-19 (ಎನ್.ಹೆಚ್.ಕೆ./ಹೆಚ್.ಕೆ) ದಿನಾಂಕ: 25.02.2019 ಹಾಗೂ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/ 86393(ಹೆಚ್.ಕೆ.) /2018-19 ದಿನಾಂಕ: 04.01.2020 ರ ಕಂಡಿಕೆ 5 ರಲ್ಲಿ "Application Fee (Non-Refundable)" ಹಾಗೂ ಕ್ರಮವಾಗಿ ಕಂಡಿಕೆ-(11/9) ರ ಸಾಮಾನ್ಯ ಸೂಚನೆಯ ಉಪ ಕ್ರಮಾಂಕ-(xv/xvi/xvii) ರಲ್ಲಿ "The application fee paid will not be refunded or adjusted towards any future recruitment under any circumstances" ಎಂದು ತಿಳಿಸಲಾಗಿರುತ್ತದೆ. ಆದ್ದರಿಂದ ಅರ್ಜಿ ಶುಲ್ಕವನ್ನು ಹಿಂದಿರುಗಿಸಲು ಅವಕಾಶವಿರುವುದಿಲ್ಲ.

	ಅಭ್ಯರ್ಥಿಗಳಿಂದ ಪಡೆದ ಅರ್ಜಿ ಶುಲ್ಕವನ್ನು ಯಾವ ಕಾಲಮಿತಿಯೊಳಗೆ ವಾಪಸ್ ನೀಡಲಾಗುವುದು: (ಸಂಪೂರ್ಣ ಮಾಹಿತಿ ನೀಡುವುದು)	
ಊ)	ಸರ್ಕಾರವು ರದ್ದುಪಡಿಸಿದ ಅಧಿಸೂಚನೆಯನ್ನು ಮತ್ತೆ ಅದೇ ಅಧಿಸೂಚನೆಯಲ್ಲಿ ಮರು ನೇಮಕಾತಿ ಮಾಡಿ, ನಿರುದ್ಯೋಗಿ ಅಭ್ಯರ್ಥಿಗಳಿಗೆ ಉದ್ಯೋಗ ಒದಗಿಸುವ ಮತ್ತು ಇಂಧನ ಇಲಾಖೆಯ ನಿಗಮ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಿ, ಈ ಸಂಸ್ಥೆಗಳ ಕಾರ್ಯವೈಖರಿಯನ್ನು ಉತ್ತಮಗೊಳಿಸುವ ಉದ್ದೇಶವನ್ನು ಹೊಂದಿದ್ದಾರೆಯೇ: ಹೊಂದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಪರೀಕ್ಷೆ ನಡೆಸಿ, ನೇಮಕಾತಿ ಮಾಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಈಗಾಗಲೇ ರದ್ದುಗೊಳಿಸಿರುವ ಅಧಿಸೂಚನೆಯಲ್ಲಿ ಒಳಗೊಂಡಿರುವ ಹುದ್ದೆಗಳನ್ನು ಮರು ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಸಂಬಂಧಪಟ್ಟ ನಿಗಮಗಳು ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುತ್ತಿವೆ.

ಸಂಖ್ಯೆ: ಎನರ್ಜಿ 220 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ
ಮತ್ತು ಸಂಸ್ಕೃತಿ ಸಚಿವರು.